BKN-33-III

Sl.No. :

Total No. of Pages : 3

ತೃತೀಯ ವರ್ಷದ ಬಿ.ಎ. ಪದವಿ ಪರೀಕ್ಷೆ, ಮೇ/ಜೂನ್- 2026

(SLM Scheme)

ಐಚ್ಛಿಕ ಕನ್ನಡ (ಪತ್ರಿಕೆ–೩)

ಛಂದಸ್ಸು ಮತ್ತು ಹಳಗನ್ನಡ ಪಠ್ಯಗಳು

(ವಡ್ಡಾರಾಧನೆ, ರನ್ನನ ಗದಾಯುದ್ಧ ಸಂಗ್ರಹ)

ಸಮಯ : 3 ಗಂಟೆಗಳು **ಗರಿಷ್ಠಾಂಕಗಳು : 80**

ಸೂಚನೆ : *ಎಲ್ಲಾ ಪ್ರಧಾನ ಪ್ರಶ್ನೆಗಳು ಕಡ್ಡಾಯ.*

ವಿಭಾಗ–ಎ

(ಛಂದಸ್ಸು ಮತ್ತು ಹಳಗನ್ನಡ ಪಠ್ಯಗಳು : 20 ಅಂಕಗಳು)

ಪ್ರ1) ಎರಡು ಪದ್ಯಭಾಗಕ್ಕೆ ಪ್ರಸ್ತಾರ ಹಾಕಿ, ಗಣ ವಿಂಗಡಿಸಿ, ಹೆಸರಿಸಿ. **[2×5=10]**

೧) ಚಲದೊಳ್ ದುರ್ಯೋಧನಂ ನನ್ನಿಯೊಳಿನ ತನಯಂ ಗಂಡಿನೊಳ್ ಭೀಮಸೇನಂ

೨) ಆ ವೇಳೆಯೊಳತಿ ಸಂಭ್ರಮಮೆಸೆದಿರೆ
ಪೂವಲಿ ಪುರವೀದಿಗಳೊಳ್ ನೆರೆದಿರೆ

೩) ಅನೃತಂ ಲೋಭಂ ಭಯಮೆಂ
ಬಿನಿತುಂ ನೀನರ್ದ ನಾಡೊಳಿರ್ಕುಮೆ ರವಿನಂ

೪) ಸುಬ್ಬಿ ಮೈನೆರೆದಾಳ ಸುಬ್ಬಿಗೇನೊಯ್ಯಾಲೆ
ಕೊಬ್ಬರಿ ಕಾರ ತಿಳಿದುಪ್ಪ

ಪ್ರ2) ಒಂದರ ಭಾವ ಸ್ವಾರಸ್ಯವನ್ನು ಬರೆಯಿರಿ. **[1×4=4]**

೧) ದೇವಾ ನಾಂ ಕಳ್ಳನಲ್ಲದುದರ್ಕೆ ಪೊಟಲೆಲ್ಲಮರಿಗುಂ
ಕಳ್ಳನನಾರಯ್ಯಲಾಱದೆನ್ನಂ ತನ್ನ ಸಾವಿಂಗಂಜಿ ಬಡವನಂ
ದೇಸಿಗನಂ ಪೊಟಲೊಳ್ ಬೈಕಂದಿರಿದುಂಡು
ಬಾಳ್ವನಂ ಪಿಡಿದುಕೊಂಡು ಬಂದು ಕೊಲಿಸಿದಪ್ಪನ್

೨) ಸಮರವ್ಯಾಪಾರಂ ಮಾ
ಣ್ದು ಮಗನೆ ನಿಜಶಿಬಿರದತ್ತೆ ಬಿಜಯಂಗೆಯ್ ಸ
ತ್ತ ಮಗಂದಿರ್ ಸತ್ತರ್ ನೀ
ನೆಮಗುಳ್ಳೊಡೆ ಸಾಲ್ವುದವರನಿಂ ತಂದಪೆವೇ

ಪ್ರ3) ನಾಲ್ಕು ಪದಗಳಿಗೆ ಅರ್ಥ ಬರೆಯಿರಿ. **[4×½=2]**

ಪೊಟಿಲು, ಪುಟ್ಟಿಗೆ, ದೂಸಿಗ, ನೇಸರ, ಆರಯ್, ಅನುಜ, ಉಡಿ, ಅನಳ

ಪ್ರ4) ಎರಡನ್ನು ಸಂದರ್ಭ ಸಹಿತ ವಿವರಿಸಿ. **[2×2=4]**

೧) ನಿಮ್ಮ ತಂದೆಯೆಪ್ಪೆಮ್ಮಜ್ಜನೊಳನೊ ಇಲ್ಲೆಯೊ

೨) ಮುಕ್ತಿಶ್ರೀಯೆಂಬೊಳ್ ಪೆಂಡತಿಗೆ ಬೇಂಟಗೊಂಡಿರ್ದೆನ್

೩) ಕಾಳಹಸ್ತಮಲ್ಲದೆ ಪರಮೇಶ್ವರಿ ಕೇಶಹಸ್ತಮಕ್ಕುಮೆ

೪) ಮರಣಕ್ಕೆನ್ನಿಂದ ನೀಂ ಮುಂಬೆದಯ್

ವಿಭಾಗ–ಬಿ

(ಛಂದಸ್ಸು : 30 ಅಂಕಗಳು)

ಪ್ರ5) ಒಂದು ಪ್ರಶ್ನೆಗೆ ಉತ್ತರಿಸಿ: **[1×10=10]**

೧) ವರ್ಣಗಣ, ಮಾತ್ರಾಗಣ, ಅಂಶಗಣ ಎಂದರೇನು? ಇವುಗಳ ಸಾಮ್ಯವೈಷಮ್ಯಗಳನ್ನು ಸೋದಾಹರಣವಾಗಿ ವಿವರಿಸಿ.

೨) ಖ್ಯಾತ ಕರ್ಣಾಟಕ ವೃತ್ತಗಳು ಯಾವುವು? ಇವುಗಳಲ್ಲಿ ಯಾವುದಾದರೂ ಮೂರು ವೃತ್ತಗಳನ್ನು ಉದಾಹರಣೆ ಸಹಿತ ಪರಿಚಯಿಸಿ.

ಪ್ರ6) ಒಂದು ಪ್ರಶ್ನೆಗೆ ಉತ್ತರಿಸಿ. **[1×10=10]**

೧) ಕಂದದ ಉಗಮ, ಲಕ್ಷಣ ಹಾಗೂ ಇತಿಹಾಸವನ್ನು ಸೋದಾಹರಣವಾಗಿ ವಿವರಿಸಿ.

೨) ಗಣಪರಿವೃತ್ತಿ, ಮುಡಿ ಪದ್ಮಗಣ ಇವುಗಳನ್ನು ಉದಾಹರಣೆ ಸಹಿತ ವಿವರಿಸಿ.

ಪ್ರ7) ಎರಡಕ್ಕೆ ಟಿಪ್ಪಣಿ ಬರೆಯಿರಿ. **[2×5=10]**

೧) ತ್ರಿಪದಿ

೨) ಅಂಶ ಷಟ್ಪದಿ

೩) ವಿಷಮ ಗಣ

೪) ಕಂಪಿತ

ವಿಭಾಗ–ಸಿ

(ಹಳಗನ್ನಡ ಪದ್ಯಗಳು : ವಡ್ಡಾರಾಧನೆ ಮತ್ತು ಗದಾಯುದ್ಧ ಸಂಗ್ರಹ : 30 ಅಂಕಗಳು)

ಪ್ರ8) ಒಂದು ಪ್ರಶ್ನೆಗೆ ಉತ್ತರಿಸಿ. **[1×10=10]**

೧) ಕಾರ್ತಿಕ ಋಷಿ ಕಥೆಯ ಸಂವಿಧಾನ ಮತ್ತು ಆಶಯಗಳನ್ನು ಕುರಿತು ಬರೆಯಿರಿ.

೨) ವಸ್ತು ವಿನ್ಯಾಸ ಮತ್ತು ಕಥನ ಕೌಶಲದ ಹಿನ್ನೆಲೆಯಲ್ಲಿ ವಿದ್ಯುಚ್ಚೋರ ರಿಸಿ ಕಥೆಯನ್ನು ವಿಶ್ಲೇಷಿಸಿ.

ಪ್ರ9) ಒಂದಕ್ಕೆ ಟಿಪ್ಪಣಿ ಬರೆಯಿರಿ. **[1×5=5]**

೧) ವೀರಶ್ರೀ

೨) ವಾಮರಥ

ಪ್ರ10)ಒಂದು ಪ್ರಶ್ನೆಗೆ ಉತ್ತರಿಸಿ. **[1×10=10]**

೧) ರನ್ನನ 'ಗದಾಯುದ್ಧ' ಕಾವ್ಯದ ಆಕರ, ಪ್ರಭಾವ ಮತ್ತು ಪ್ರೇರಣೆಗಳನ್ನು ಕುರಿತು ವಿವರಿಸಿ.

೨) 'ಗದಾಯುದ್ಧ' ಕಾವ್ಯದ ವಸ್ತುವಿನ ಸ್ವರೂಪ ಮತ್ತು ಮಹತ್ವವನ್ನು ವಿವರಿಸಿ.

ಪ್ರ11)ಒಂದಕ್ಕೆ ಟಿಪ್ಪಣಿ ಬರೆಯಿರಿ. **[1×5=5]**

೧) ಸಂಜಯ

೨) ದ್ರೌಪದಿ

